



'ಬಾಪೂಜಿ,' ಕೊನೆಗೆ ಹರಿಲಾಲ ಎದ್ದು ನಿಂತು ಹೇಳಿದ, "ನಾನು ಇಂದು ಬೆಳಿಗ್ಗೆಯ ರೈಲಿನಲ್ಲಿ ಡರಬನ್‌ಗೆ ಹೋಗಲು ನನಗೆ ಅನುಮತಿಯನ್ನು ಕೊಡಿ. ಡರಬನ್‌ನಿಂದ ನಾಳೆಯ ಹಡಗಿನಲ್ಲಿ ಹಿಂದೂಸ್ತಾನಕ್ಕೆ ಹೋಗುತ್ತೇನೆ.'

ಬಾಪೂ ಅವರು ಎದ್ದು ನಿಂತ ಹರಿಲಾಲನನ್ನು ನೋಡಿ ಮೆಲ್ಲನೆ ಹೇಳಿದರು, 'ಸರಿ, ನಿನ್ನಿಚ್ಛೆಯಂತೆಯೇ ಮಾಡು. ನೀನು ನಿನ್ನ ಗುರಿಯಲ್ಲಿ ಯಶಸ್ಸನ್ನು ಕಾಣು, ನಿನ್ನ ಕಾರ್ಯದಲ್ಲಿ ಸಫಲತೆಯನ್ನು ಪಡಿ. ಒಂದು ವೇಳೆ ನಿನಗೆ ಅಪಯಶಸ್ಸು ಒದಗಿ ಬಂದರೆ, ನಿನ್ನ ತಂದೆಯ ಮನೆಯ ಬಾಗಿಲು ನಿನಗೆ ಸದಾ ತೆರೆದಿರುತ್ತದೆ. ಚಂಚಿ ಮತ್ತು ರಾಮಿಯನ್ನು ಚೆನ್ನಾಗಿ ನೋಡಿಕೋ.'

ಈಗ ಎಲ್ಲವೂ ಮುಕ್ತಾಯಗೊಂಡಿತ್ತು.

ಹರಿಲಾಲ ಮತ್ತೊಮ್ಮೆ ಆ ಟಿನ್‌ನ ಬಾಕ್ಸ್‌ನಲ್ಲಿ ಎಲ್ಲವನ್ನೂ ಇಟ್ಟುಕೊಂಡ. ಭಗವದ್ಗೀತೆಯ ಪ್ರತಿ ಮತ್ತು ಬಾಪೂ ಅವರ ಭಾವಚಿತ್ರವನ್ನು ಬಟ್ಟೆಗಳ ಕೆಳಗೆ ಸುರಕ್ಷಿತವಾಗಿಟ್ಟುಕೊಂಡ. ಭಾರವಾದ ಹೆಜ್ಜೆಗಳನ್ನು ಹಾಕುತ್ತಾ ಬಾ ಅವರ ಬಳಿಗೆ ಹೋಗಿ ಅವರ ಕಾಲುಗಳನ್ನು ಮುಟ್ಟಿ ನಮಸ್ಕರಿಸಿದ. ಬಾ ಅವರ ಕಣ್ಣುಗಳಿಂದ ಕಣ್ಣೀರು ಹರಿಯಿತು. ಅವರು ಒಂದು ಮಾತನ್ನೂ ಹೇಳದೆ ಮಗನ ಹಣೆಗೆ ತಿಲಕವನ್ನಿಟ್ಟರು. ಒಂದು ಬಟ್ಟಲಿನಲ್ಲಿ ಮೊಸರು ತಂದು ಚಮಚದಿಂದ ಮಗನ ಬಾಯಿಗೆ ಹಾಕಿದರು. ಕುಲದೇವತೆ ಎದುರು ದೀಪವನ್ನು ಬೆಳಗಿದರು. ಹರಿಲಾಲ ದೀಪಕ್ಕೆ ನಮಸ್ಕರಿಸಿದ. ಬಾ ಅವರು ಅನೇಕ ಬಾರಿ ಮಗನ ಶರೀರವನ್ನು ನೇವರಿಸಿದರು.

ಕೆಲವೇ ಸಮಯದಲ್ಲಿ ಹರಿಲಾಲ ಮತ್ತು ಬಾಪೂ ಜೋಹಾನ್ಸ್‌ಬರ್ಗ್ ಸ್ಟೇಷನ್‌ಗೆ ಬಂದರು. ರೈಲು ಇನ್ನೇನು ಹೊರಡುವುದರಲ್ಲಿತ್ತು. ಹರಿಲಾಲ ಟಿಕೆಟ್ ಖರೀದಿಸಿದ. ಬಾಪೂ ಅವನಿಗೆ ಅಗತ್ಯವಿರುವಷ್ಟು ಹಣವನ್ನು ಕೊಟ್ಟರು. ಸ್ಟೇಷನ್‌ಗೆ ಬಂದಿದ್ದ ಪರಿಚಿತರು ಬಾಪೂ ಮತ್ತು ಹರಿಲಾಲನನ್ನು ಸುತ್ತುವರೆದರು. ಎಲ್ಲರೂ ಪರಿಸ್ಥಿತಿಯ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳುತ್ತಿದ್ದರು. ಯಾರೂ ಮಾತನಾಡುವಂಥ ಸ್ಥಿತಿಯಲ್ಲಿರಲಿಲ್ಲ, ಆದರೆ ಕೆಲವೇ ಸಮಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ನೆರೆದಿದ್ದ ಜನಸಮೂಹ ಸಹ ದುಃಖದ ಮಡುವಿನಲ್ಲಿತ್ತು. ಹರಿಲಾಲನ ಗೃಹತ್ಯಾಗ ಮತ್ತು ಅವನು ಮರಳಿ ಹೋಗುವ ವಿಷಯ ಜೋಹಾನ್ಸ್‌ಬರ್ಗ್‌ನ ಮನೆಮನೆಗೂ ತಲುಪಿತ್ತು.

ಹರಿಲಾಲ ರೈಲಿನಲ್ಲಿ ತನ್ನ ಲಗ್ಗೇಜುಗಳನ್ನು ಇಟ್ಟ. ಪ್ಲಾಟ್‌ಫಾರ್ಮ್ ಮೇಲೆ ಕೊನೆಯ ಬಾರಿಗೆ ದೃಷ್ಟಿಯನ್ನು ಹರಿಸಿದ. ಅವನ ಮುಖದಲ್ಲಿ ದಟ್ಟವಾದ ವ್ಯಥೆ ಮತ್ತು ಹತಾಶ ಭಾವನೆ ಮೂಡಿದವು. ರೈಲು ಸಿಳ್ಳು ಹಾಕಿತು. ಗಾರ್ಡ್‌ನ ಸಿಳ್ಳೆಯೂ ಕೇಳಿಸಿತು. ಹರಿಲಾಲ ಪ್ಲಾಟ್‌ಫಾರ್ಮ್‌ನಲ್ಲಿ ನಿಂತು ಭಾವುಕರಾಗುತ್ತಿದ್ದ ಬಾಪೂ ಅವರ ಕಾಲಿಗೆರಗಿದ. ಮೊದಲ ಬಾರಿಗೆ ಬಾಪೂ ಅವರ ಕಣ್ಣುಗಳು ತೇವಗೊಂಡವು. ಮಗನ ತಲೆಯನ್ನು ನೇವರಿಸುವಾಗ ಅವರ ತುಟಿಗಳು ಕಂಪಿಸಿದವು.

'ತಂದೆಯಿಂದಾಗಿ ನಿನಗೆ ಅನ್ಯಾಯವಾಯಿತು ಎಂದು ನಿನಗೆಂದಾದರು ಅನ್ನಿಸಿದರೆ, ಕ್ಷಮಿಸಿ ಬಿಡು ಹರಿ!'

## ಹದಿನಾರು

ಮುಂಬೈನ ರೇವುಪಟ್ಟಣದಲ್ಲಿ ಹಡಗು ಲಂಗರು ಹಾಕಿದಾಗ, ಹರಿಲಾಲ ಸಂಪೂರ್ಣವಾಗಿ ಸ್ವಸ್ಥನಾಗಿದ್ದ. ಅವನು ಸುಮಾರು ಐದು ವರ್ಷಗಳ ನಂತರ ಸ್ವದೇಶಕ್ಕೆ ಮರಳಿ ಬಂದಿದ್ದ. ಈಗ್ಗೆ ಐದು ವರ್ಷಕ್ಕೆ ಮೊದಲು ಆಫ್ರಿಕಾಕ್ಕೆ ಹೋಗಲು ಅವನು ಇದೇ ಹಡಗಿನಲ್ಲಿ ಕೂತಿದ್ದ. ಆಗ ಉಜ್ವಲ ಭವಿಷ್ಯದ ಕನಸುಗಳು ಕಣ್ಣುಗಳಲ್ಲಿ ತೇಲುತ್ತಿದ್ದವು. ಆ ಕನಸುಗಳು ಈಗ ಚೂರುಚೂರಾಗಿದ್ದವು. ಆಫ್ರಿಕಾದಲ್ಲಿದ್ದಾಗ ಆಗಾಗ ದೇಶದ ಈ ನೆಲ ನೆನಪಾಗುತ್ತಿತ್ತು, ಈಗ ಆ ನೆಲವೇ ಕಣ್ಣುಗಳೆದುರು ವ್ಯಾಪಿಸಿತ್ತು. ಆದರೆ ಹರಿಲಾಲನಿಗೆ ಭೂಮಿಯಲ್ಲಿ ತಾನು ಒಂಟಿ, ಅಪರಿಚಿತ ಎಂದು ಅನ್ನಿಸುತ್ತಿತ್ತು. ರಾಜಕೋಟಕ್ಕೆ ಹೋದ ನಂತರ ತಾನು ದೊಡ್ಡಪ್ಪನಿಗೆ, ಗೋಕಿ ಸೋದರತ್ತೆಗೆ, ಮಾವನಿಗೆ, ಚಿಕ್ಕಪ್ಪಂದಿರುಗಳಿಗೆ ಏನು ಹೇಳುವುದು, ಅವರಿಗೆ ಮುಖ ಹೇಗೆ ತೋರಿಸುವುದು ಎಂದು ಅವನಿಗೆ ಹೊಳೆಯುತ್ತಿರಲಿಲ್ಲ. ಅದರಲ್ಲೂ ಗುಲಾಬ ಮತ್ತು ರಾಮಿಗೆ...ಈಗ ಅವನು ಮಗನೊಬ್ಬನಿಗೂ ತಂದೆಯಾಗಿದ್ದ. ಎಲ್ಲರೂ ತನ್ನನ್ನು ನೋಡಿದಾಗ ತಾನು ಹೇಗೆ ಅವರನ್ನು ನೋಡಲಿ? ದೃಢವಾದ ಕಾರಣ ಸಿಗುವವರೆಗೆ ಮತ್ತು ತಾನು ತನ್ನ ಕಾಲುಗಳ ಮೇಲೆ ನಿಲ್ಲದವರೆಗೆ... ಗುಲಾಬಳ ನೆನಪು ಅವನನ್ನು ವ್ಯಗ್ರಗೊಳಿಸುತ್ತಿತ್ತು. ತನ್ನ ಹೊಸ ಮಗುವಿನ ಮುಖವನ್ನು ಸಹ ಅವನಿನ್ನೂ ನೋಡಿರಲಿಲ್ಲ. ಗುಲಾಬ ಬರೆದಿದ್ದಳು

'ಮಗನ ಹೆಸರು ಕಾಂತಿ ಎಂದಿಡಲಾಗಿದೆ.'

ಹರಿಲಾಲ ಕಾಂತಿಯನ್ನು ನೋಡಲು ಕಾತುರಗೊಂಡಿದ್ದ. ಒಂದು ವೇಳೆ ಗುಲಾಬ ಈಗ ತನ್ನ ಬಳಿ ಇದ್ದಿದ್ದರೆ ಬಹುಶಃ ಈ ಒಂಟಿತನ...ಈ ಅಸಹಾಯಕತೆ... ಈಗಲೂ ಮನಸ್ಸಿನಲ್ಲಿ ಮನೆಮಾಡಿ ಕೂತಿದ್ದ ರೋಷ...ಇವೆಲ್ಲವೂ ಹಗುರವಾಗುತ್ತಿದ್ದವು. ಹರಿಲಾಲ ಗುಲಾಬಳನ್ನು ಭೇಟಿಯಾಗಲು ಕಳವಳಗೊಂಡ.

ಮುಂಬೈನಿಂದ ಅವನು ಈಗ್ಗೆ ಐದು ವರ್ಷಗಳ ಹಿಂದೆ ತನ್ನ ಹಡಗಿನಲ್ಲಿ ಕೂತಾಗ ಅದೆಷ್ಟೋ ಜನ ಅವನನ್ನು ಬೀಳ್ಕೊಡಲು ಬಂದಿದ್ದರು. ಅವರನ್ನೆಲ್ಲಾ ಹರಿಲಾಲ ಸ್ಮರಿಸಿಕೊಂಡ. ಡರಬನ್‌ನ ರೇವುಪಟ್ಟಣದಲ್ಲೂ ಅವನನ್ನು ಕರೆದೊಯ್ಯಲು ಪರಾಗರು ಬಂದಿದ್ದರು. ಈ ಬಾರಿ ಡರಬನ್‌ನಿಂದ ಮರಳುವಾಗ ಡರಬನ್‌ನಲ್ಲಿ ತನ್ನನ್ನು ಬೀಳ್ಕೊಡಲು ಯಾರೂ ಬಂದಿರಲಿಲ್ಲ; ಇತ್ತ ಮುಂಬೈ ರೇವುಪಟ್ಟಣದಲ್ಲೂ ಸಹ ಅವನನ್ನು ಸ್ವಾಗತಿಸಲು ಯಾರೂ ಹಾಜರಿರಲಿಲ್ಲ. ಇದ್ದಕ್ಕಿದ್ದಂತೆ ಹರಿಲಾಲನನ್ನು ಹತಾಶ ಭಾವನೆ ಆವರಿಸಿತು. ಇದುವರೆಗೆ ಹತ್ತಿಕ್ಕಿದ್ದ ರೋಷ ಅಕಸ್ಮಾತ್ ಹೊಮ್ಮಿ ಹೊರಗೆ ಬಂತು.

ಆದರೆ ಅವನು ಒಂದು ನಿರ್ಧಾರಕ್ಕೆ ಬಂದಿದ್ದ

ಏನಾದರೂ ಆಗಲಿ, ಇನ್ನು ಮತ್ತೆ ನಾನು ಅಧ್ಯಯನವನ್ನು ಆರಂಭಿಸಬೇಕು. ಒಮ್ಮೆ ವಿದ್ಯಾಭ್ಯಾಸದ ರೈಲು ಹಳಿಗಿಳಿದರೆ, ಅಗತ್ಯವಾದ ಸಂಪಾದನೆಯನ್ನೂ ಮಾಡಿಕೊಳ್ಳುತ್ತೇನೆ.

ಅವನು ಬಾಪೂ ಅವರ ಹಣವನ್ನು ಪಡೆದು ಬಂದಿದ್ದ... ಅವರು ಕೊಟ್ಟ ಹಣ ಇನ್ನೂ ಜೇಬಿನಲ್ಲಿತ್ತು. ಬಹುಶಃ ಇನ್ನೂ ಕೆಲವು ದಿನಗಳು ಅವರಿಂದ ಹಣವನ್ನು ತೆಗೆದುಕೊಳ್ಳಬೇಕಾಗುವುದು. ಇಲ್ಲ ಇಲ್ಲ...ಈಗ ಹರಿಲಾಲ ತನ್ನನ್ನು ಓರ್ವ ಸ್ವತಂತ್ರ ವ್ಯಕ್ತಿಯಾಗಿ ರೂಪಿಸಿಕೊಳ್ಳಲು ಬಯಸುತ್ತಿದ್ದ. ತಾನು ಬಾಪೂ ಅವರ ಮಗನಾಗಿರಬಹುದು, ಬಾಪೂ ತನ್ನ ತಂದೆಯಾಗಿರಬಹುದು, ಆದರೆ ಇನ್ನು ಹರಿಲಾಲ ಬಾಪೂ ಅವರ ಮಗನಾಗಿ ಅಲ್ಲ, ಹರಿಲಾಲನಾಗಿ ಮಾತ್ರ ತನ್ನ ಅಸ್ತಿತ್ವವನ್ನು ರೂಪಿಸಿಕೊಳ್ಳಲು ಬಯಸುತ್ತಿದ್ದ. ಇದುವರೆಗೆ ಅವನು ಬಾಪೂ ಅವರ ಮಗನಾದ್ದರಿಂದ ಯಾವುದೇ ಲಾಭ ಲಭಿಸಿರಲಿಲ್ಲ. ಬಾಪೂ ಅವರು ಲಾಭವನ್ನು ಪಡೆಯಲು ಸಹ ಎಲ್ಲಿ ಬಿಟ್ಟಿದ್ದರು? ಈಗ ಅವನು ಖುದ್ದು ಆ ಲಾಭಗಳನ್ನು ಪಡೆಯುವುದಕ್ಕಾಗಿ ಹೇಗೆ ಆಸೆ ಪಡುವುದು?

ಮುಂಬೈಯಲ್ಲಿ ಯಾರನ್ನೂ ಭೇಟಿಯಾಗದೆ, ಒಂದು ದಿನವೂ ಅಲ್ಲಿ ಉಳಿಯದೆ ಹರಿಲಾಲ ಅಹಮದಾಬಾದ್ ರೈಲಿಗೆ ಹತ್ತಿದ. ಅಹಮದಾಬಾದ್‌ಗೆ ಹೋದ ಮರುದಿನವೇ ಅವನು ಮೆಟ್ರಿಕ್‌ಗೆ ದಾಖಲಾಗಲು 'ನ್ಯೂ ಇಂಗ್ಲಿಷ್ ಸ್ಕೂಲ್' ನ ಪ್ರಾಂಶುಪಾಲರಿಗೆ ಅರ್ಜಿಯನ್ನು ಕೊಟ್ಟ.

'ನೀನು...ನೀನು...ಮೆಟ್ರಿಕ್‌ಗೆ ದಾಖಲಾಗಲು ಬಯಸುತ್ತೀಯ?' ಪ್ರಾಂಶುಪಾಲರು ಆಶ್ಚರ್ಯದಿಂದ ಹರಿಲಾಲನನ್ನು ನೋಡಿದರು. ಹರಿಲಾಲನ ಯುವವಯಸ್ಸು ಮತ್ತು ಆರೋಗ್ಯಕ್ಕೆ ತಕ್ಕಂತಿದ್ದ ಅವನ ಉತ್ತಮ ಶರೀರವನ್ನು ನೋಡಿ, ಪ್ರಾಂಶುಪಾಲರು ಅವನನ್ನು ವಿದ್ಯಾರ್ಥಿಯಾಗಿ ಒಪ್ಪಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳ ನಡುವೆ ಹರಿಲಾಲ ಅವರಲ್ಲೊಬ್ಬ ವಿದ್ಯಾರ್ಥಿಯಂತೆ ಕಾಣದೆ, ಅವರ ಪೋಷಕರಂತೆ ಕಾಣ ಬರುತ್ತಿದ್ದ.

'ಹೌದು, ಸಾರ್..' ಹರಿಲಾಲ ತನ್ನ ನೋವನ್ನು ಹತ್ತಿಕ್ಕಿಕೊಂಡು ಹೇಳಿದ, 'ಇಂಗ್ಲಿಷಿನ ಐದನೇ ತರಗತಿಯವರೆಗೆ ಎಸ್ಪಲೆನೆಡ್ ಹೈಸ್ಕೂಲ್‌ನಲ್ಲಿ ಓದಿದ ನಂತರ ನಾನು ವಿದ್ಯಾಭ್ಯಾಸವನ್ನು ಬಿಟ್ಟಿದ್ದೆ.'

'ನೀನು ಓದುವ ವಯಸ್ಸಿನಲ್ಲಿ ಓದಲಿಲ್ಲ, ಈ ವಯಸ್ಸಿನಲ್ಲೆ ಅದೇನು ಓದುತ್ತೀಯ?' ಪ್ರಾಂಶುಪಾಲರು ಗೇಲಿ ಮಾಡಿದರು. 'ಸಾರ್, ನಾನೊಂದು ಕಾರಣದಿಂದ ವಿದ್ಯಾಭ್ಯಾಸವನ್ನು ಅರ್ಧಕ್ಕೇ ಬಿಡಬೇಕಾಯಿತು.' ಹರಿಲಾಲ ಸಂಕೋಚದಿಂದ ಹೇಳಿದ, 'ನನ್ನ ತಂದೆ ತಾಯಿ ಆಫ್ರಿಕಾದಲ್ಲಿದ್ದರು. ನಾನು ಆಫ್ರಿಕಾಕ್ಕೆ ಹೋಗಬೇಕಾಯಿತು...'

'ಆಫ್ರಿಕಾ?' ಪ್ರಾಂಶುಪಾಲರು ಮೊದಲ ಬಾರಿಗೆ ಹರಿಲಾಲನ ಅರ್ಜಿಯನ್ನು ಸರಿಯಾಗಿ ಓದಿದರು. ಅಕಸ್ಮಾತ್ ಅವರ ಮುಖದ ಭಾವನೆಯಲ್ಲಿ ಬದಲಾವಣೆ ಕಂಡಿತು. ಅವರು ಸಂತೋಷ ಮತ್ತು ಆಶ್ಚರ್ಯ ಮಿಶ್ರಿತ ಭಯದಿಂದ ಹೇಳಿದರು, 'ಓ ಹೋ! ನೀವು ಆಫ್ರಿಕಾದ ಬ್ಯಾರಿಸ್ಟರ್ ಗಾಂಧಿಯವರ